ಈ) ಅನುದಾನದ ಲಭ್ಯತೆಯನ್ನು ಆಧರಿಸಿ ಜಮಖಂಡಿ ತಾಲ್ಲೂಕಿನಲ್ಲಿ ಮಿನಿ ವಿಧಾನಸೌಧ ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗುವುದು

805 (1201) ಶ್ರೀ ಸಿದ್ದುಸಾವದಿ (ಜಮಖಂಡಿ) ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಬೊಕ್ಕಸಕ್ಕೆ ರಸ್ತೆ ಕೆನಾಲ ಕಾಮಗಾರಿ ಮತ್ತು ಕಟ್ಟಡ ಕಾಮಗಾರಿಗಳ ಗುತ್ತಿಗೆದಾರರಿಂದ ಬರುವ ವಿವಿಧ ತೆರಿಗೆಗಳ ಮೊತ್ತವೆಷ್ಟು ,

ಆ) ರಸ್ತೆ, ಕಾಲುವೆ, ಕಟ್ಟಡಗಳನ್ನು ನಿರ್ಮಿಸುವ ಗುತ್ತಿಗೆದಾರರಿಗೆ ಆಕರಣೆ ಮಾಡುವ ರಾಜ್ಯ ಮತ್ತು ಕೇಂದ್ರ ತೆರಿಗೆಗಳಾವುವು ಹಾಗೂ ಎಷ್ಟು ಪ್ರಮಾಣ ಆಕರಣೆ ಮಾಡಲಾಗುವುದು ,

ಇ) ಯಾವ ರೀತಿ ಗುತ್ತಿಗೆದಾರರಿಂದ ಕರ ಆಕರಣೆ ಮಾಡಲಾಗುತ್ತಿದೆ ಮತ್ತು ಇಲ್ಲಿಯವರೆಗೆ ರಾಜ್ಯದಲ್ಲಿ ಗುತ್ತಿಗೆದಾರರಿಂದ ಆಕರಣೆ ಮಾಡದೇ ಇರುವ ಪ್ರಕರಣಗಳು ಎಷ್ಟು ,

ಈ) ಯಾವಾಗ ಮತ್ತು ಹೇಗೆ ಆಕರಣೆ ಮಾಡಲಾಗುವುದು ,

ಉ) ಸರ್ಕಾರಿ ಕೆಲಸ ಕಾರ್ಯಗಳಿಗೆ ರಸ್ತೆ, ಕೆನಾಲ ಮತ್ತು ಶಾಲೆ ಕಟ್ಟಡಗಳ ಕೆಲಸಗಳಿಗೆ ಸರ್ಕಾರ ಆಕರಣೆ ಮಾಡುವ ರೀತಿಯಲ್ಲಿ ರಿಯಾಯಿತಿ ಮಾಡುವ ಯೋಜನೆ ಇದೆಯೇ ,

ಊ) ಹಾಗಿಲ್ಲದಿದ್ದಲ್ಲಿ, ಮಂಜೂರು ಹಂತದಲ್ಲಿಯೇ ಗುತ್ತಿಗೆದಾರನ ತೆರಿಗೆ ಮತ್ತು ರಾಯಲ್ಟಿಗಳಂತಹ ಕರಗಳನ್ನು ಮುರಿದು ಕೈಗೊಳ್ಳಲಾಗುವುದೇ ?

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)

ಅ) 2006–07ನೇ ಸಾಲಿನಲ್ಲಿ (ಏಪ್ರಿಲ್ 2006 ರಿಂದ ಜನವರಿ 2007 ರವರೆಗೆ) ರಾಜ್ಯದ ಬೊಕ್ಕಸಕ್ಕೆ ರಸ್ತೆ ಕಾಲುವೆ ಮತ್ತು ಕಟ್ಟಡ ಕಾಮಗಾರಿಗಳಿಂದ ಸುಮಾರು ರೂ 286 00 ಕೋಟಿ ಮೌಲ್ಯವರ್ಧಿತ ತೆರಿಗೆ ಸಂಗ್ರಹವಾಗಿರುತ್ತದೆ

ಆ) ರಸ್ತೆ, ಕಾಲುವೆ ಮತ್ತು ಕಟ್ಟಡಗಳನ್ನು ನಿರ್ಮಿಸುವ ಗುತ್ತಿಗೆದಾರರಿಗೆ ಕಾಮಗಾರಿಯಲ್ಲಿ ಉಪಯೋಗಿಸಲಾದ ಸರಕುಗಳ ತೆರಿಗೆದಾಯಕ ವಹಿವಾಟಿನ ಮೇಲೆ ಶೇ 12 5% ರಷ್ಟು ಮೌಲ್ಯವರ್ಧಿತ ತೆರಿಗೆ ಇರುತ್ತದೆ ಗುತ್ತಿಗೆದಾರರು ರಾಜೀತೆರಿಗೆ ಸೌಲಭ್ಯದಲ್ಲಿ ತೆರಿಗೆ ಪಾವತಿಸಲು ಆಯ್ಕೆ ಮಾಡಿದ್ದಲ್ಲಿ ಗುತ್ತಿಗೆಯ ಒಟ್ಟು ಮೌಲ್ಯದ ಮೇಲೆ ಶೇ 4 ರಷ್ಟು ತೆರಿಗೆ ಬಾಧ್ಯತೆ ಇರುತ್ತದೆ (ಕೇಂದ್ರ ತೆರಿಗೆಗಳ ವಿವರ ಲಭ್ಯವಿರುವುದಿಲ್ಲ)

ಇ) ರಾಜ್ಯದಲ್ಲಿ ಕಾಮಗಾರಿ ಕೈಗೊಳ್ಳುವ ಗುತ್ತಿಗೆದಾರರು ಕನಾಟಕ ವೌಲ್ಯವರ್ಧಿತ ತೆರಿಗೆ ಕಾಯ್ದೆಯಡಿಯಲ್ಲಿ ಕಡ್ಡಾಯವಾಗಿ ನೋಂದಣಿ ಪಡೆಯಬೇಕಾಗುತ್ತದೆ ಅವರು ತಮ್ಮ ವಾರ್ಷಿಕ ವಹಿವಾಟು ರೂ 15 ಲಕ್ಷಕ್ಕಿಂತ ಕಡಿಮೆ ಇದ್ದಲ್ಲಿ ಮೂರು ತಿಂಗಳಿಗೊಮ್ಮೆ ಹಾಗೂ ಅದನ್ನು ಮೀರಿದ್ದಲ್ಲಿ ಅಧವಾ

ಅವರು ರಾಜೀ ತೆರಿಗೆ ಪಾವತಿ ಸೌಲಭ್ಯ ಆಯ್ಕೆ ಮಾಡಿದ್ದಲ್ಲಿ ಪ್ರತಿ ತಿಂಗಳು ತಮ್ಮ ವಹಿವಾಟಿನ / ಗುತ್ತಿಗೆ ಮೊತ್ತದ ಮತ್ತು ಪಾವತಿಸಬೇಕಾದ ತೆರಿಗೆ ವಿವರಗಳನ್ನು ಘೋಷಿಸುವ ರಿಟರ್ನ್‌ಗಳನ್ನು ಪಾವತಿಸಬೇಕಾದ ತೆರಿಗೆ ಮೊತ್ತದೊಂದಿಗೆ ವಾಣಿಜ್ಯ ತೆರಿಗೆ ಇಲಾಖೆಯ ಮೌಲ್ಯವರ್ಧಿತ ತೆರಿಗೆ ಕಛೇರಿಗಳಿಗೆ ಸಲ್ಲಿಸಬೇಕಾಗುತ್ತದೆ ನೋಂದಣಿಗೆ ಮತ್ತು ತೆರಿಗೆ ಪಾವತಿಸಲು ಬಾಧ್ಯರಾದ ಗುತ್ತಿಗೆದಾರರನ್ನು ಗುರುತಿಸಿ, ನೋಂದಾಯಿಸಲು ಮತ್ತು ಅವರು ಪಾವತಿಸಬೇಕಾದ ತೆರಿಗೆ ವಸೂಲು ಮಾಡಲು ವಾಣಿಜ್ಯ ತೆರಿಗೆ ಇಲಾಖೆ ಸೂಕ್ತ ಕ್ರಮ ಕೈಗೊಳ್ಳುತ್ತಿದೆ

ಈ) – ಮೇಲಿನಂತೆ –

ಉ) – ಇಲ್ಲ –

ಊ) ಸರ್ಕಾರದ ಇಲಾಖೆಗಳು, ಸ್ಥಳೀಯ ಸಂಸ್ಥೆಗಳು ಮತ್ತು ಪ್ರಾಧಿಕಾರಿಗಳ ಕಾಮಗಾರಿಗಳನ್ನು ಗುತ್ತಿಗೆದಾರರು ಕೈಗೊಂಡಲ್ಲಿ ಸದರಿ ಇಲಾಖೆಗಳು, ಸ್ಥಳೀಯ ಸಂಸ್ಥೆಗಳು ಮತ್ತು ಪ್ರಾಧಿಕಾರಿಗಳು ಕಾಮಗಾರಿಗಳಿಗೆ ಹಣ ಸಂದಾಯ ಮಾಡುವ ಮೊತ್ತದಲ್ಲಿ ಗುತ್ತಿಗೆದಾರರ ಅಂತಹ ಕಾಮಗಾರಿಗಳ ಬಗ್ಗೆ ಸರ್ಕಾರಕ್ಕೆ ಸಲ್ಲಿಸಬೇಕಾದ ತೆರಿಗೆಗೆ ಸಮನಾದ ಮೊತ್ತವನ್ನು ಮೂಲದಲ್ಲಿಯೇ ಕಡಿತ ಮಾಡಿ ಸರ್ಕಾರಿ ಖಜಾನೆಗೆ ತುಂಬಬೇಕಾಗಿರುತ್ತದೆ

ಕಾಮಗಾರಿಗಳನ್ನು ಮಂಜೂರು ಮಾಡುವ ಹಂತದಲ್ಲಿ ಯಾವುದೇ ಕರ ಅಥವಾ ರಾಯಲ್ಟಿ ಆಕರಣೆ ಮಾಡಲಾಗುವುದಿಲ್ಲ ನಿಯಮಾನುಸಾರ ತೆರಿಗೆಯಾಗಲಿ ಅಥವಾ ರಾಯಲ್ಟಿಯಾಗಲಿ ಗುತ್ತಿಗೆದಾರರು ನಿರ್ವಹಿಸಿದ ಕಾಮಗಾರಿಗಳ ಅಳತೆ ಮೇರೆಗೆ ಪಾವತಿಸಲಾಗುವ ಬಿಲ್ಲುಗಳಲ್ಲಿ ಮಾತ್ರ ಆಕರಿಸಲಾಗುವುದು

806 (1202) ಶ್ರೀ ಸಿದ್ದು ಸವದಿ (ಜಮಖಂಡಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದಿನಾಂಕ 1–4–2005 ರಿಂದ ಬಾಗಲಕೋಟೆ ಜಿಲ್ಲೆಯಲ್ಲಿ ಆಕರಣೆ ಆಗಿರುವ ಒಟ್ಟು ನೋಂದಣಿ ಶುಲ್ಕ ಮತ್ತು ಅಗ್ರಿಮೆಂಟ್ ಪೇಪರ್ ಮಾರಾಟದಿಂದ ಬಂದ ಹಣವೆಷ್ಟು , (31–1–2007 ರ ವರೆಗೆ)

ಆ) ಸದರಿ ಹಣವನ್ನು ಯಾವ ಯಾವ ಉದ್ದೇಶಗಳಿಗಾಗಿ ಬಳಸಲಾಗುವುದು , ಇಲ್ಲಿಯವರೆಗೆ ಖರ್ಚು ಮಾಡಿದ ಹಣವೆಷ್ಟು , (ತಾಲ್ಲೂಕುವಾರು ಮಾಹಿತಿ ಒದಗಿಸುವುದು) ,

ಇ) ಆಯಾ ತಾಲ್ಲೂಕಿನಲ್ಲಿ ಶುಲ್ಕದ ಹಣವನ್ನು ಆಯಾ ತಾಲ್ಲೂಕಿನ ಅಬಿವೃದ್ಧಿಗೆ ಬಳಸುವಂತೆ ನಿಯಮಗಳಿದ್ದರೂ ಸಹ ನಿಯಮ ಪಾಲಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಈ) ದಿನಾಂಕ 1–4–2004 ರಿಂದ ಇಲ್ಲಿಯವರೆಗೆ ಜಮಖಂಡಿ ತಾಲ್ಲೂಕಿನಲ್ಲಿ ಇಂತಹ ಶುಲ್ಕ ಹಣದಲ್ಲಿ ಕೈಗೊಂಡ ಕಾಮಗಾರಿಗಳಾವುವು ?